# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 993 |
| ಸದಸ್ಯರ ಹೆಸರು | : | ಶ್ರೀ ಬಸನಗೌಡ ಬಾದರ್ಲಿ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 25.08.2026 |
| ಉತ್ತರಿಸುವ ಸಚಿವರು | : | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ (2023-24, 2024-25 ಮತ್ತು 2025-26) ಸಿಂಧನೂರು ತಾಲ್ಲೂಕಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ವರ್ಷವಾರು ನಿಗದಿಪಡಿಸಲಾದ ಭೌತಿಕ ಮತ್ತು ಆರ್ಥಿಕ ಗುರಿ ಎಷ್ಟು; | ಕಳೆದ ಮೂರು ವರ್ಷಗಳಲ್ಲಿ (2023-24, 2024-25 ಮತ್ತು 2025-26) ಸಿಂಧನೂರು ತಾಲ್ಲೂಕಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ವರ್ಷವಾರು ನಿಗದಿಪಡಿಸಲಾದ ಭೌತಿಕ ಮತ್ತು ಆರ್ಥಿಕ ಗುರಿ ಈ ಕೆಳಕಂಡಂತಿದೆ. |

**(ಭೌತಿಕ:ಸಂಖ್ಯೆಗಳಲ್ಲಿ, ಆರ್ಥಿಕ:ರೂ.ಲಕ್ಷಗಳಲ್ಲಿ)**

| ಕ್ರ.ಸಂ | ವರ್ಷ | ಭೌತಿಕ ಗುರಿ | ಆರ್ಥಿಕ ಗುರಿ |
|---|---|---|---|
| 1. | 2023-24 | 813 | 350.23 |
| 2. | 2024-25 | 776 | 634.76 |
| 3. | 2025-26 | 257 | 308.78 |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಆ) | ಅದೇ ಅವಧಿಯಲ್ಲಿ ಕೃಷಿ ಯಂತ್ರೋಪಕರಣಗಳ ಖರೀದಿಗೆ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ ಎಷ್ಟು; ಹಾಗೂ ಸಹಾಯಧನ ಮಂಜೂರಾಗಿ ವಿತರಣೆಗೊಂಡ ರೈತರ ಸಂಖ್ಯೆ ಎಷ್ಟು; | ಅದೇ ಅವಧಿಯಲ್ಲಿ ಕೃಷಿ ಯಂತ್ರೋಪಕರಣಗಳ ಸಹಾಯಧನಕ್ಕಾಗಿ ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ ಹಾಗೂ ಸಹಾಯಧನ ಮಂಜೂರಾಗಿ ವಿತರಣೆಗೊಂಡ ರೈತರ ಸಂಖ್ಯೆ ಈ ಕೆಳಕಂಡಂತಿದೆ. |

| ಕ್ರ. ಸಂ | ವರ್ಷ | ಅರ್ಜಿ ಸಲ್ಲಿಸಿದ ರೈತರ ಸಂಖ್ಯೆ | ಸಹಾಯಧನ ಮಂಜೂರಾದ ರೈತರ ಸಂಖ್ಯೆ |
|---|---|---|---|
| 1. | 2023-24 | 1298 | 813 |
| 2. | 2024-25 | 1023 | 776 |
| 3. | 2025-26 | 875 | 257 |
| **ಒಟ್ಟು** | | **3196** | **1846** |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಇ) | ಸಿಂಧನೂರು ತಾಲ್ಲೂಕಿನಲ್ಲಿ ಈ ಯೋಜನೆಯಡಿ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭತ್ತ ನಾಟಿ ಯಂತ್ರ, ಕೊಯ್ಲು ಯಂತ್ರ, ಥ್ರೆಷರ್ ಹಾಗೂ ಇತರೆ ಕೃಷಿ ಯಂತ್ರೋಪಕರಣಗಳಿಗೆ ಪ್ರತ್ಯೇಕವಾಗಿ ಎಷ್ಟು ರೈತರಿಗೆ ಸಹಾಯಧನ ನೀಡಲಾಗಿದೆ; | ಸಿಂಧನೂರು ತಾಲ್ಲೂಕಿನಲ್ಲಿ ಕೃಷಿ ಯಾಂತ್ರೀಕರಣ ಯೋಜನೆಯಡಿ ಟ್ರ್ಯಾಕ್ಟರ್, ಪವರ್ ಟಿಲ್ಲರ್, ಭತ್ತ ನಾಟಿ ಯಂತ್ರ, ಕೊಯ್ಲು ಯಂತ್ರ, ಥ್ರೆಷರ್ ಹಾಗೂ ಇತರೆ ಕೃಷಿ ಯಂತ್ರೋಪಕರಣಗಳಿಗೆ ಸಹಾಯಧನದ ಪಡೆದ ರೈತರ ವಿವರ ಈ ಕೆಳಕಂಡಂತಿದೆ. |

| ಕ್ರ. ಸಂ | ಯಂತ್ರೋಪಕರಣ | ವರ್ಷ | | |
|---|---|---|---|---|
| | | 2023-24 | 2024-25 | 2025-26 |
| 1. | ಟ್ರ್ಯಾಕ್ಟರ್ | 02 | 0 | 0 |
| 2. | ಪವರ್ ಟಿಲ್ಲರ್ | 26 | 34 | 08 |
| 3. | ಭತ್ತ ನಾಟಿ ಯಂತ್ರ | 0 | 0 | 0 |
| 4. | ಕೊಯ್ಲು ಯಂತ್ರ | 00 | 00 | 00 |
| 5. | ಥ್ರೆಷರ್ | 09 | 07 | 06 |
| 6. | ಇತರೆ ಕೃಷಿ ಯಂತ್ರೋಪಕರಣಗಳು | 776 | 735 | 243 |
| ಒಟ್ಟು | | 813 | 776 | 257 |

<table>
<tr>
<td>ಈ)</td>
<td>ಪ್ರಸಕ್ತ 2026-27ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ನಿಗದಿಪಡಿಸಿರುವ ಗುರಿ ಎಷ್ಟು: ಮತ್ತು ಇದುವರೆಗೆ ಸಾಧಿಸಿರುವ ಪ್ರಗತಿ ಎಷ್ಟಾಗಿದೆ:</td>
<td>ಪ್ರಸಕ್ತ 2026-27ನೇ ಸಾಲಿನಲ್ಲಿ ಸಿಂಧನೂರು ತಾಲ್ಲೂಕಿಗೆ ಕೃಷಿ ಯಾಂತ್ರೀಕರಣ ಯೋಜನೆಯಡಿ ನಿಗದಿಪಡಿಸಿದ ಗುರಿ ಮತ್ತು ಇದುವರೆಗೆ ಸಾಧಿಸಿರುವ ಪ್ರಗತಿ ಈ ಕೆಳಕಂಡಂತಿದೆ.<br><br>(ಭೌತಿಕ:ಸಂಖ್ಯೆಗಳಲ್ಲಿ, ಆರ್ಥಿಕ:ರೂ.ಲಕ್ಷಗಳಲ್ಲಿ)
<table>
<tr><th colspan="2">ಗುರಿ</th><th colspan="2">ಸಾಧಿಸಿದ ಪ್ರಗತಿ</th></tr>
<tr><td>ಭೌತಿಕ</td><td>ಆರ್ಥಿಕ</td><td>ಭೌತಿಕ</td><td>ಆರ್ಥಿಕ</td></tr>
<tr><td>112</td><td>90.02</td><td>112</td><td>72.92</td></tr>
</table>
</td>
</tr>
<tr>
<td>ಉ)</td>
<td>ಸಿಂಧನೂರು ತಾಲ್ಲೂಕಿನಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರು ಹಾಗೂ ರೈತ ಗುಂಪುಗಳಿಗೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಕಸ್ಟಮ್ ಹೈರಿಂಗ್ ಸೆಂಟರ್‌ಗಳ ಮೂಲಕ ಯಂತ್ರೋಪಕರಣಗಳನ್ನು: ಬಾಡಿಗೆಗೆ ಒದಗಿಸುವ ವ್ಯವಸ್ಥೆಯನ್ನು ಇನ್ನಷ್ಟು ವಿಸ್ತರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?</td>
<td>ಸಿಂಧನೂರು ತಾಲ್ಲೂಕಿನಲ್ಲಿ ಸಣ್ಣ ಮತ್ತು ಅತಿಸಣ್ಣ ರೈತರು ಹಾಗೂ ರೈತ ಗುಂಪುಗಳಿಗೆ ಕೃಷಿ ಯಂತ್ರೋಪಕರಣಗಳ ಬಳಕೆಯನ್ನು ಹೆಚ್ಚಿಸುವ ಉದ್ದೇಶದಿಂದ ಕೃಷಿ ಯಂತ್ರಧಾರೆ ಕೇಂದ್ರಗಳ ಮೂಲ ಒಡಂಬಡಿಕೆ ಅವಧಿಯು 06 ವರ್ಷಗಳಾಗಿದ್ದು, ಅನೇಕ ಕೃಷಿ ಯಂತ್ರಧಾರೆ ಕೇಂದ್ರಗಳ ಅವಧಿ ಸ್ಥಾಪನೆಯಾಗಿ 06 ವರ್ಷಗಳಿಗಿಂತ ಹೆಚ್ಚು ಆಗಿರುವುದರಿಂದ ಕೃಷಿ ಯಂತ್ರಧಾರೆ ಯೋಜನೆಯನ್ನು ಸ್ಥಗಿತಗೊಳಿಸಲಾಗಿರುತ್ತದೆ.<br>ಆದರೆ ಹೈಟೆಕ್ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಒದಗಿಸುವ ವ್ಯವಸ್ಥೆಯನ್ನು ಬಲಪಡಿಸಲು ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯನ್ನು ಪ್ರಾರಂಭಿಸಲಾಗಿದೆ. ಇದರಲ್ಲಿ ಅತ್ಯಾಧುನಿಕ ಕಟಾವು ಯಂತ್ರಗಳಾದ ಕಂಬೈಂಡ್ ಹಾರ್ವೆಸ್ಟರ್, ರೀಪರ್ಸ್, ಬಹುಬೆಳೆ ಒಕ್ಕಣೆ ಯಂತ್ರ, ಕಬ್ಬು ಕಟಾವು ಯಂತ್ರಗಳಿಗೆ ಶೇ.40 ರಿಂದ 70 ರ ಸಹಾಯಧನ ಒದಗಿಸಲಾಗುತ್ತಿದೆ.<br>ಮುಂದುವರೆದು, ಪ್ರಸಕ್ತ ಸಾಲಿನಲ್ಲಿ ಸದರಿ ಯೋಜನೆಯಡಿ ನಿಖರ ಬಿತ್ತನೆ ಕೂರಿಗೆ, ಮತ್ತು ಯಾಂತ್ರೀಕೃತ ಭತ್ತ ನಾಟಿ ಮಾಡುವ ಯಂತ್ರಗಳನ್ನು ಸೇರ್ಪಡೆಗೊಳಿಸಲು ಕ್ರಮಕೈಗೊಳ್ಳಲಾಗಿದೆ.<br>ಮೇಲ್ಕಂಡ ಎಲ್ಲಾ ಯಂತ್ರೋಪಕರಣಗಳನ್ನು ಬಾಡಿಗೆ ಆಧಾರದ ಮೇಲೆ ಅಗತ್ಯವಿರುವ ರೈತರಿಗೆ ಒದಗಿಸಲು ಅನುಕೂಲವಾಗುತ್ತದೆ.</td>
</tr>
</table>

ಸಂಖ್ಯೆ: AGRI/135/ASC/2026

P. M. Narendraswamy

**(ಪಿ.ಎಂ.ನರೇಂದ್ರ ಸ್ವಾಮಿ)**

ಕೃಷಿ ಸಚಿವರು